ಖಡಿ ರಸ್ತೆಗಳು - 3, ಖರ್ಚಾದ ಹಣ ರೂ. 53,160-00

ಕಲ್ಲಿನ ಹೊದಿಕೆ ರಸ್ತೆ-1, ಖರ್ಚಾದ ಹಣ ರೂ. 6,300-00

ಇ) ಹೊಸದಾಗಿ ಹುಟ್ಟಿಕೊಂಡಿರುವ ಅನಧಿಕೃತ ಬಡಾವಣೆಗಳಲ್ಲಿಯ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡಿದ್ದರೆ ಅವುಗಳನ್ನು ಪರಿಶೀಲಿಸಿ ಮಹಾನಗರಸಭೆಗೆ ಹಸ್ತಾಂತರ ಮಾಡಿಕೊಂಡು ವಿದ್ಯುತ್ ಹಾಗೂ ಮೂಲ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಅನಧಿಕೃತ ಬಡಾವಣೆಗಳಿಗೆ ಮೂಲಕ ಸೌಲಭ್ಯ ಒದಗಿಸಲಾಗುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಆರೋಗ್ಯ ಪರಿವೀಕ್ಷಕರು

116 - ಶ್ರೀ ಅಶೋಕ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯಲ್ಲಿ ಎಷ್ಟು ಜನ ಆರೋಗ್ಯ ಪರಿವೀಕ್ಷಕರು ಹಾಗೂ ಎಲ್ಲೆಲ್ಲಿದ್ದಾರೆ?

ಆ) ಯಾವ ಪರಿವೀಕ್ಷಕರ ಮೇಲಾದರೂ ಪ್ರಜೆಗಳು ದೂರು ನೀಡಿರುವ ಪ್ರಯುಕ್ತ ದೂರು ಕ್ರಮ ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು)

ಇ) ಕಸ ಗೂಡಿಸುವ ಕಾರ್ಮಿಕರ ಸಂಖ್ಯೆ ಎಷ್ಟು?

ಈ) ಪರಿವೀಕ್ಷಕರಿಗೆ ಹಾಗೂ ಕಸ ಗುಡಿಸುವವರಿಗೆ ಪ್ರತಿ ವರುಷ ಎಷ್ಟು ಹಣ ಸಂಬಳ ಕೊಡುತ್ತಿದೆ?

ಉ) ಸದ್ಯ ಇವರಿಂದ ಅವಳಿನಗರಗಳನ್ನು ಸ್ವಚ್ಛತೆ ಇಡಲು ಸಾಧ್ಯವೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಒಟ್ಟು - 3. ಹುಬ್ಬಳ್ಳಿಯಲ್ಲಿ - 2. ಧಾರವಾಡದಲ್ಲಿ - 1

ಆ) ಇವರ ಮೇಲೆ ಅಂಥ ಯಾವುದೇ ದೂರುಗಳು ಸಾರ್ವಜನಿಕರಿಂದ ಬಂದಿರುವುದಿಲ್ಲ.

ಇ) ಒಟ್ಟು 1190 ಪೌರ ಕಾರ್ಮಿಕರಿದ್ದು ಇದಲ್ಲದೇ 46 ಜನರು ದಿನಗೂಲಿ ತಳಹದಿಯ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ.

ಈ) ರೂ. 3,80,40,000-00

ಉ) ಈಗಿನ ಸಿಬ್ಬಂದಿಯಿಂದ ಪೂರ್ತಿ ನಗರವನ್ನು ಸ್ವಚ್ಛ ಇಡಲು ಕಷ್ಟಕರವಾಗುತ್ತದೆ. ಹೆಚ್ಚಿನ ಸಿಬ್ಬಂದಿಯು ಅವಶ್ಯಕತೆ ಇದೆ. ಆದರೆ ಈ ಹೆಚ್ಚಿನ ಪೌರ ಕಾರ್ಮಿಕರ ನೇಮಕಾತಿಯಿಂದ ಮಹಾನಗರಸಭೆ ಅಧಿಕ ಆರ್ಥಿಕ ಹೊರೆ ಆಗುವುದರಿಂದ ಮಹಾನಗರಪಾಲಿಕೆಯು ಕೆಲವು ಪ್ರದೇಶಗಳಲ್ಲಿನ ಕಸವನ್ನು ತೆಗೆಯುವ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯಲ್ಲಿ ನೀರಿನ ಪೂರೈಕೆಗಾಗಿ ಇರುವ ಓವರ್ ಹೆಚ್ ಟ್ಯಾಂಕುಗಳ ಸಂಖ್ಯೆ

117 - ಶ್ರೀ ಅಶೋಕ್ ಎಸ್. ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯಲ್ಲಿ ನೀರಿನ ಪೂರೈಕೆಗಾಗಿ ಇರುವ ಓವರ್‌ಹೆಡ್ ಟ್ಯಾಂಕುಗಳ ಸಂಖ್ಯೆ ಎಷ್ಟು? 1993 ರಿಂದ ಎಷ್ಟು ಪೈಪುಗಳ ಜೋಡಣೆ ಆಗಿದೆ; ಹಾಗೂ ಈ ಬಗ್ಗೆ ಆದ ಖರ್ಚು ಎಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :